**ಪಿ.ಡಬ್ಲು.೨**

ಸಾಕ್ಷಿಯನ್ನು ಇಂದು ದಿನಾಂಕ: *25.07.2024* ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು

**ಮುಂದುವರೆದ ಪಾಟೀ ಸವಾಲು ಆರೋಪಿ ನಂ.೧ರ ಪರ ಶ್ರೀ ಆರ್.ಕೆ.ಹೆಚ್. ವಕೀಲರಿಂದ**

ಆರೋಪಿ ನಂ.೧, *2008* ರಲ್ಲಿ ವಯೋನಿವೃತ್ತಿ ಹೊಂದಿರುತ್ತಾರೆ ಎಂಧರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂಧು ನುಡಿಯುತ್ತಾರೆ. ನಮ್ಮ ಇಲಾಖೆಯಲ್ಲಿ ಪ್ರತಿವರ್ಷ ಲೆಕ್ಕ ಪರಿಶೋಧನೆ ಮಾಡುತ್ತಾರೆ ಎಂಧರೆ ಸರಿ ಅಲ್ಲ. ಎಷ್ಟು ವರ್ಷಕ್ಕೊಮ್ಮೆ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. ಲೆಕ್ಕ ಪರಿಶೋಧನೆ ಮಾಡುವಾಗ ಏನಾದರೂ ಲೆಕ್ಕದಲ್ಲಿ ವ್ಯತ್ಯಾಸ ಕಂಡು ಬಂತು ಎಂದರೆ ಸಂಬಂಧಪಟ್ಟ ಅಧಿಕಾರಿ ವಿರುದ್ದ ಆಡಳಿತಾತ್ಮಕ ಇಲಾಖಾ ವಿಚಾರಣೆ ಮಾಡುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿ ನಂ.೧ ಮತ್ತು ೨ ರವರು ತಮ್ಮ ಕಾರ್ಯಕ್ಷೇತ್ರದಲ್ಲಿ ಮತ್ತು ತಮ್ಮ ಅವಧಿಯಲ್ಲಿ ಕಾನೂನುಬದ್ದವಾಗಿ ಕೆಲಸ ಮಾಡಿರುತ್ತಾರೆ, ಯಾವುದೇ ತಪ್ಪು ಮಾಡಿರುವುದಿಲ್ಲ ಎಂದರೆ

ಸರಿ ಅಲ್ಲ, ಸಾಕ್ಷಿ ಮುಂದುವರೆದು ನಾವು ಲೆಕ್ಕ ಪರಿಶೋಧನೆ ಮಾಡುವಾಗ ತಪ್ಪು ಕಂಡು ಬಂದಿರುತ್ತದೆ ಎಂದು ನುಡಿಯುತ್ತಾರೆ. ಲೆಕ್ಕ ಪರಿಶೋಧನೆ ಮಾಡುತ್ತಿರುವ ಸಮಯದಲ್ಲಿ ಯಾವ ವರ್ಷದಲ್ಲಿ ಸದರಿ ತಪ್ಪು ಕಂಡು ಬಂದಿತು, ಆ ಸಮಯದಲ್ಲಿ ಯಾವ ಅಧಿಕಾರಿಗಳು ಇದ್ದರು ಎಂದು ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿ. ಯಾವುದೇ ಪುರಾವೆಗಳು ಇಲ್ಲದಿದ್ದರೂ ಚಾಸಾ-೧ ರವರು ಖೊಟ್ಟಿ ಫಿರ್ಯಾದಿಯನ್ನು ಸಲ್ಲಿಸಿರುತ್ತಾರೆ, ಅದಕ್ಕೆ ಪೂರಕವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಆರ್ಟಿಕಲ್ *15* ರ ಪ್ರಕಾರ ಎ.ಇ.ಇ. ಅವರಿಗೆ ಮತ್ತು *343* ರ ಪ್ರಕಾರ ಬಿಲ್ಲುಗಳನ್ನು ಕಳಿಸಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಸದರಿ ಬಿಲ್ಲುಗಳನ್ನು ಯಾವ ತಾರೀಖಿನಂದು ಮತ್ತು ಯಾರು ಕಳಿಸಿದ್ದಾರೆ ಎಂದು ನನಗೆ ಹೇಳಲು ಬರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಈಗ ನೆನಪಿಲ್ಲ ಎಂದು ನುಡಿಯುತ್ತಾರೆ. ಟೋಕನ ನಂಬರುಗಳನ್ನು ಸಹ ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿ. ಆರೋಪಿತರಿಗೂ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲ, ಚಾಸಾ-೧ ರವರು ಖೊಟ್ಟಿ ಫಿರ್ಯಾದಿಯನ್ನು ಸಲ್ಲಿಸಿರುತ್ತಾರೆ, ಅವರ ಮಾತನ್ನು ಕೇಳಿಕೊಂಡು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಆಡಳಿತಾತ್ಮಕ ಇಲಾಖೆಗೂ ನಮಗೂ ಯಾವುದೇ ಸಂಬಂಧವಿಲ್ಲ, ಆದರೆ ನಾವು ಅಡಿಟ್ ವರದಿಯನ್ನು ನಮ್ಮ ಮೇಲಾಧಿಕಾರಿಗಳಿಗೆ ಸಲ್ಲಿಸುತ್ತೇವೆ ಎಂದು ನುಡಿಯುತ್ತಾರೆ.

ನಾನು ಲೆಕ್ಕ ಪರಿಶೋಧನ ಅಧಿಕಾರಿ ಎಂದು ಕರ್ತವ್ಯ ನಿರ್ವಹಿಸುತ್ತಿರುವಾಗ ನನ್ನ ಮೇಲಾಧಿಕಾರಿಗಳು ನನಗೆ ಅಮರ್ಜಾ ಅಣ್ಣೆಕಟ್ಟಿನ ಕೊರಳ್ಳಿ ಉಪವಿಭಾಗದ ಎಲ್ಲ ಕಡತಗಳನ್ನು ಲೆಕ್ಕ ಪರಿಶೋಧನೆ ಮಾಡಲು ಆದೇಶ ನೀಡಿದರು, ಅವರ ಆದೇಶದಂತೆ ಲೆಕ್ಕ ಪರಿಶೋಧನೆ ಮಾಡಲು ಆರಂಭಿಸಿದೆನು ೧೯೯೬ ರಿಂದ ೨೦೦೬ ರವರಗೆ ಸದರಿ ಅಮರ್ಜಾ ಅಣ್ಣೆಕಟ್ಟು ಪಿ.ಡಬ್ಲೂ.ಡಿರವರ ನೇತೃತ್ವದಲ್ಲಿ ಇತ್ತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ತದನಂತರ ಕರ್ನಾಟಕ ನೀರಾವರಿ ನಿಗಮಕ್ಕೆ ಹಸ್ತಾಂತರವಾಯಿತು, ನಾನು ಲೆಕ್ಕ ಪರಿಶೋಧನೆಯನ್ನು ೧೯೯೬ ರಿಂದ ೨೦೦೦ ರವರಿಗೆ ಲೆಕ್ಕ ಪರಿಶೋಧನೆ ಮಾಡಿರುತ್ತೆನೆ, ಸದರಿ ಲೆಕ್ಕ ಪರಿಶೋಧನೆ ಮಾಡುವ ಸಂದರ್ಬದಲ್ಲಿ ಸದರಿ ಅಣ್ಣೆಕಟ್ಟು ಪಿ.ಡಬ್ಲೂ.ಡಿರವರ ನೇತೃತ್ವದಲ್ಲಿ ಇತ್ತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಆ ಇಲಾಖೆಯಲ್ಲಿ ಸದರಿ ೧೯೯೫ ರಿಂದ ೨೦೦೦ ಇಸವಿವರೆಗೆ ಎ.ಕೆ.ಚೌಡೆಕರ ಅನ್ನುವರು ಎ.ಇ.ಇಎಂದು ಕರ್ತವ್ಯ ನಿರ್ವಹಿಸುತ್ತಿದ್ದರು, ಅದರಂತೆ ಆರೋಪಿ ನಂ.೨ರವರು ೧೭.೦೭.೨೦೦೦ ರಿಂದ ೨೦೧೦ ರವರಗೆ ಎ.ಇ.ಇ ಎಂದು ಕರ್ತವ್ಯ ನಿರ್ವಹಿಸುತ್ತೀದ್ದಾರೆ, ಅದರಂತೆ ಆರೋಪಿ.ನಂ.೩ ರವರು ಏಪ್ರಿಲ್ ೨೦೦೦ ದಿಂದ ೨೦೦೧ ರವರಗೆ ಇನ್ ಚಾರ್ಜ ಎ.ಇ.ಇ ಎಂದು ಕರ್ತವ್ಯ ನಿರ್ವಹಿಸುತ್ತೀದ್ದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಅದರಂತೆ ಆರೋಪಿ ನಂ.೪ ರವರು ೧೯೯೧ ರಿಂದ ೨೦೦೮ ರವರಗೆ ಎಸ್.ಡಿ.ಎ ಎಂದು ಸದರಿ ಇಲಾಖೆಯಲ್ಲಿ ಕರ್ತವ್ಯದಲ್ಲಿ ಕಾರ್ಯನಿರ್ವಹಿಸುತ್ತೀದ್ದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ

ಸದರಿ ಇಲಾಖೆಯ ಎಲ್ಲ ಜವಾಬ್ದಾರಿಯು ಆರಿಟಿಕಲ್ ೧೫ ರ ಪ್ರಕಾರ ಎ.ಇ.ಇ ರವರಿಗೆ ಇರುತ್ತದೆ. ಸದರಿ ಎ.ಇ.ಇ ರವರು ಆರಿಟಿಕಲ್ *343* ರ ಪ್ರಕಾರ ೩ ಬಿಲ್ ಗಳನ್ನು ಟೆಜುರಿಗೆ ಕಳಿಸಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಪ್ರೊಸಿಜರ ಪ್ರಕಾರ ಟೆಜುರಿರವರು ಒಂದು ಟೋಕನ್ನು ಕೊಡುತ್ತಾರೆ ಆ ಟೋಕನ್ನು ಪಡೆದುಕೊಂಡು ಎಸ.ಬಿ.ಆಯ್

ಬ್ಯಾಂಕನಲ್ಲಿ ನೀಡಿದರೆ ಹಣವನ್ನು ಬ್ಯಾಂಕನವರು ಸಂದಾಯ ಮಾಡುತ್ತಾರೆ, ಸದರಿ ಹಣವನ್ನು ಪಡೆದನಂತರ ಎ.ಇ.ಇ ರವರು ಅದನ್ನು ದಿಸ್ ಪ್ರೇಸ್ ಮಾಡಬೇಕಾಗುತ್ತದೆ, ಆದರೆ ಆರೋಪಿ ನಂ.೧ ರಿಂದ ೩ ರವರು ಅವರವರ ಕೆಲಸದ ಸಮಯದಲ್ಲಿ ಆರೋಪಿ ನಂ೪ ರವರಿಗೆ ಸದರಿ ಕೆಲಸವನ್ನು ಮಾಡಲು ಹೇಳುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಸದರಿ ಎ.ಇ.ಇರವರು ಆಫೀಸ್ ಆಡರ್ ರೆಜಿಸ್ತ್ರರ, ಪೇ ಬಿಲ್ಲ ರೆಜಿಸ್ಟರ, ಸಂಬಳ ರೆಜಿಸ್ಟರ, ಅರಿಯರಸ್ ಟಿ.ಎ ಅಡವಾನ್ಸ ಕ್ಯಾಟಿಜನಸ್ ಬಿಲ್ಲ ಇವುಗಳನ್ನು ತಯಾರಿಸಿ ಟೆಜುರಿಗೆ ಕಳುಹಿಸಿ ಚಕ್ ಪಡೆದು ಬ್ಯಾಂಕನಿಂದ ಹಣವನ್ನು ಪಡದು ತಂದು ವಿತರಣೆ ಮಾಡುವ ಬಗ್ಗೆ ಎಸ್,ಡಿ,ಎ ಆದ ಆರೋಪಿ ನಂ. ೪ ರವರಿಗೆ ಕರ್ತವ್ಯ ನಿರ್ವಹಣೆ ಒಪ್ಪಿಸಿದ್ದು ಇರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಆದರ ಪ್ರಕಾರ ಸದರಿ ಆರೋಪಿ ನಂ.೪ *1994* ರಿಂದ *2000* ರವಗೆ ನೌಕರರ ಸಂಬಳ ಹಬ್ಬದ ಮುಂಗಡ ಹಣ ರವಾಸ ಭತ್ಯೆ ಇತರೆ ತುಟ್ಟಿ ಭತ್ಯಗೆ ಸಂಬಂದಿಸಿದಂತೆ ನಕಲಿ ಬಿಲ್ ಗಳನ್ನು ಮಾಡಿಕೊಂಡರು ಅಳಂದ ಉಪಠಾಣೆಗೆ ಸಲ್ಲಿಸಿ ಅಲ್ಲಿಂದ ಚಕ್ ಪಡದು ಎಸ್.ಪಿ.ಆಯ್ ಆಳಂದದಲ್ಲಿ ಸಲ್ಲಿಸಿ ಹಣವನ್ನು ಹಂತ ಹಂತವಾಗಿ ಪಡೆದುಕೊಂಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ನಾವು ಲೆಕ್ಕ ಪರಿಶೋಧನೆ ಮಾಡಿದಾಗ ಸುಮಾರು ರೂ.*32,78,000/*- ಗಳಷ್ಟು ವ್ಯತ್ಯಾಸವಾಗಿರುತ್ತದೆ. ಸುಮಾರು *169* ಟೋಕಗಳನ್ನು ಬಳಸಿದ್ದು ಇರುತ್ತದೆ. ನಾವು ಲೆಕ್ಕ ಪರಿಶೋಧನೆ ಮಾಡುವಾಗ ತಕರಾರು ಹಾಕಿರುತ್ತೇವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ.

**ಪಾಟೀ ಸವಾಲು ಆರೋಪಿ ನಂ.೨ರ ಪರ ಶ್ರೀ ಎಂ.ಕೆ.ಜಿ. ವಕೀಲರಿಂದ**

[ ಆರೋಪಿ ನಂ.೨ ರ ಪರ ವಕೀಲರು ಆರೋಪಿ ನಂ-೧ ರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ತಮ್ಮ ಪಾಟೀ ಸವಾಲಿನಲ್ಲಿ ಅಳವಡಿಸಿಕೊಂಡಿರುತ್ತಾರೆ ]

ಮರುವಿಚಾರಣೆ : ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.ಆಳಂದ